ತರೀಕೆರೆ ತಾಲ್ಲೂಕು ನೇರಳೇಕೆರೆ ಗ್ರಾಮಕ್ಕೆ ಮಂಜೂರಾಗಿದ್ದ ಪಶುವೈದ್ಯ ಆಸ್ಪತ್ರೆ ಬಗ್ಗೆ

೬೫೯. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) — ಮಾನ್ಯ ರೇಷ್ಮೆ, ಪಶು ಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ೧೯೮೦-೮೧, ೧೯೮೧-೮೨ ಮತ್ತು ೧೯೮೨-೮೩ ಇಸವಿಗಳಲ್ಲಿ ಎಷ್ಟು ಪಶು ವೈದ್ಯ ಆಸ್ಪತ್ರೆಗಳನ್ನು ತೆರೆಯಲಾಗಿದೆ.

ಆ) ತರೀಕೆರೆ ತಾಲ್ಲೂಕು ನೇರಳೆಕೆರೆ ಗ್ರಾಮಕ್ಕೆ ಪಶುವೈದ್ಯ ಆಸ್ಪತ್ರೆಯು ಮಂಜೂರಾತಿ ದೊರೆತು ಕಟ್ಟಡ ಕಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ನೀಡಿದ್ದ ಮಂಜೂರಾತಿಯನ್ನು ವಾಪಸ್ಸು ಪಡೆದಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ)	ಪಶುವೈದ್ಯ ಶಾಲೆಗಳು	ಗ್ರಾಮೀಣ ಪಶುವೈದ್ಯ ಶಾಲೆಗಳು	ಒಟ್ಟು
೧೯೮೦-೮೧ನೇ ಸಾಲಿನಲ್ಲಿ	೨೩	೧೨	೩೫
೧೯೮೧-೮೨ನೇ ಸಾಲಿನಲ್ಲಿ	೧	೩	೪
೧೯೮೨-೮೩ನೇ ಸಾಲಿನಲ್ಲಿ	೪	೪	೮
ಒಟ್ಟು ...	೨೮	೧೯	೪೭

ಆ) ಕಟ್ಟಡ ಕಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹಣಕಾಸಿನ ಮತ್ತು ಸಿಬ್ಬಂದಿ ಸಮಸ್ಯೆಯವರ ಕೊರತೆಯಿಂದ ೧೯೮೨-೮೩ನೇ ಸಾಲಿನಲ್ಲಿ ಸದರಿ ಗ್ರಾಮಕ್ಕೆ ಮಂಜೂರಾದ ಗ್ರಾಮೀಣ ಪಶುವೈದ್ಯ ಶಾಲೆಯನ್ನು ಪ್ರಾರಂಭಿಸಲಾಗಿಲ್ಲ.

ತರೀಕೆರೆ ತಾಲ್ಲೂಕಿನ ಅರಣ್ಯ ಇಲಾಖೆಯ ಜಮೀನಿನ ಬಗ್ಗೆ

೬೬೧. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) —ಮಾನ್ಯ ರೇಷ್ಮೆ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯ ಜಮೀನು ಒತ್ತುವರಿಯಾಗಿದೆಯೇ ?

ಆ) ರೈತರು ಒತ್ತುವರಿ ಮಾಡಿದ ಜಮೀನಿನಲ್ಲಿ ಅರಣ್ಯ ಬೆಳೆಸಲು ಸರ್ಕಾರದವರು ಉದ್ದೇಶಿಸಿದ್ದಾರೆಯೇ ?

ಇ) ಹಾಗಿದ್ದಲ್ಲಿ ೧೯೮೫-೮೬ನೇ ಸಾಲಿನಲ್ಲಿ ಎಷ್ಟು ಸಸಿಗಳನ್ನು ನಡೆಲಾಗಿದೆ ಹಾಗೂ ಎಲ್ಲೆಲ್ಲಿ ಮತ್ತು ಅದಕ್ಕಾಗಿ ತಗುಲಿದ ವೆಚ್ಚವೆಷ್ಟು ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನಾ ಮತ್ತು ಮತ್ಸ್ಯೋದ್ಯಮ ಮಂತ್ರಿಗಳು).—

ಅ) ತರೀಕೆರೆ ತಾಲ್ಲೂಕಿನಲ್ಲಿ ೨೫೯.೪೬ ಹೆಕ್ಟೇರ್ ಅರಣ್ಯ ಪ್ರದೇಶವು ಒತ್ತುವರಿಯಾಗಿದೆ.

ಆ) ಇತ್ತೀಚೆಗೆ ಅಂದರೆ ೧೯೭೮ರ ನಂತರ ಒತ್ತುವರಿ ಮಾಡಿದ ಅರಣ್ಯ ಜಮೀನಿನಲ್ಲಿ ಅರಣ ಬೆಳೆಸಲು ಉದ್ದೇಶಿಸಲಾಗಿದೆ.

ಇ) ೧೯೮೫-೮೬ನೇ ಸಾಲಿನಲ್ಲಿ ಒತ್ತುವರಿ ಮಾಡಿದ ಅರಣ್ಯ ಪ್ರದೇಶದಲ್ಲಿ ಸಸಿಗಳನ್ನು ಹಾ ನೆಡುತೋಪುಗಳನ್ನು ಬೆಳೆಸಲಿಲ್ಲ. ಆದ್ದರಿಂದ ಈ ಬಗ್ಗೆ ಯಾವ ಹಣವು ಖರ್ಚಾಗಿರುವುದಿಲ್ಲ.

ಈ ಕಾರ್ಯಕ್ರಮವನ್ನು ಇನ್ನೂ ಮುಂದೆ ತೆಗೆದುಕೊಳ್ಳಲಾಗುವುದು.